ಕಾಳಜಿ ತೋರುವ ಪೊರಂಬೋಕ್ಕುವಿನಂತಹ ಹಾಡುಗಳು, ಕಲಾವಿದನ ಸೃಜನಶೀಲತೆಯನ್ನು ಕೊಲ್ಲಲು ಯತ್ನಿಸಿದ ಸಮಾಜದ ವಿರುದ್ಧ ದನಿ ಎತ್ತಿದ ತಮಿಳು ಕವಿ ಪೆರುಮಾಳ್ ಮುರುಗನ್‌ರ ಕವನಗಳು, ಸೌಹಾರ್ದವನ್ನು ಮಾತನಾಡಿದ ಸೂಫಿಯ ಹಾಡುಗಳು, ಕ್ರಿಸ್ತನ ಗೀತೆಗಳು, ಶರಣರ ವಚನಗಳು, ಪ್ರಕೃತಿಪ್ರೀತಿಯನ್ನು ವ್ಯಕ್ತಪಡಿಸುವ ಸಂಸ್ಕೃತದ ಹಾಡುಗಳು, ಮುಂತಾದುವು. ಈ ಪಯಣವನ್ನು ಮಾತಿಗೆ ನಿಲುಕದ ಭವ್ಯ ಅಪಾರದತ್ತ ಹೋಗುವ ಹೆಜ್ಜೆಗಳನ್ನಾಗಿ ಭಾವಿಸಿದ್ದಾರೆ. ತಮ್ಮ ವಿದ್ಯಾರ್ಥಿಗಳು ಸ್ವಂತ ನಿಲುವನ್ನು ಹೊಂದಲು ಕೃಷ್ಣ ಪ್ರಚೋದಿಸುತ್ತಾರೆ. ಒಂದರ್ಥದಲ್ಲಿ ಅವರ ತರಗತಿಗಳು ಸಂಗೀತ, ಸಮಾಜ, ರಾಜಕೀಯ ಎಲ್ಲದಕ್ಕೂ ವಿದ್ಯಾರ್ಥಿಗಳು ತುಡಿಯುವಂತೆ ಮಾಡಿ, ಅವರನ್ನು ಜೀವಂತವಾಗಿರುವುದಕ್ಕೆ ಪ್ರೇರೇಪಿಸುತ್ತವೆ.

"ನನ್ನ ತರಗತಿಗಳು ಕೃತಿಗಳನ್ನು ಹಾಡುವುದಕ್ಕೆ ಹಾಗೂ ಕಲಿಯುವುದಕ್ಕಷ್ಟೇ ಎಂದೂ ಸೀಮಿತವಾಗಿಲ್ಲ. ರಾಜಕೀಯವೂ ಸೇರಿದಂತೆ ಪ್ರತಿಯೊಂದೂ ಚರ್ಚೆಯಾಗುತ್ತದೆ. ಆದರೆ ಯಾವುದೇ ಸಿದ್ಧಾಂತ ಅಥವಾ ಮಾರ್ಗವನ್ನು ಅವರ ಮೇಲೆ ನಾನು ಹೇರುವುದಿಲ್ಲ. ನನ್ನನ್ನು ಒಪ್ಪದಿರುವುದಕ್ಕೆ ಎಲ್ಲರಿಗೂ ಸ್ವಾತಂತ್ರ್ಯವಿದೆ. ತರಗತಿಗಳಲ್ಲಿ ನಾವು ಉದ್ದೇಶಪೂರ್ವಕವಾಗಿ ಪರಸ್ಪರ ಪ್ರಚೋದಿಸುತ್ತೇವೆ. ಅದರಲ್ಲೊಂದು ಸೊಗಸಿದೆ. ಆಳಕ್ಕೆ ಇಳಿಯಬೇಕಾದರೆ ಪ್ರಚೋದನೆ ಬೇಕು. ಆದರೆ ಇವೆಲ್ಲವೂ ಅವರ ಸಂಗೀತದಲ್ಲಿ ಅಭಿವ್ಯಕ್ತಿಯಾಗದೆಯೂ ಇರಬಹುದು. ಅವರ ವೃತ್ತಿಬದುಕಿಗೆ ಇನ್ನೂ ಹಲವು ಆಯಾಮಗಳಿರುತ್ತವೆ. ಅವರಿಗೆ ಅವರದೇ ಆದ ಹೋರಾಟಗಳಿವೆ. ಅವುಗಳನ್ನು ಅವರು ನಿಭಾಯಿಸಬೇಕು. ಅವರು ಏನಾಗಬೇಕು, ಎಲ್ಲಿ ಉಳಿಯಬೇಕು ಎಂಬುದನ್ನು ಅವರು ನಿರ್ಧರಿಸಬೇಕು. ಒಂದು ಸಂತೋಷದ ವಿಷಯವೆಂದರೆ ನನ್ನೊಂದಿಗಿದ್ದು, ಹಾಡುತ್ತಾ, ಸಂವಾದಿಸುತ್ತಿರುವ ವಿದ್ಯಾರ್ಥಿಗಳು ನಿಷ್ಕ್ರಿಯವಾಗಿ, ಎಲ್ಲವೂ ಅದರಿಚ್ಛೆಯಂತೆ ಆಗಲಿ ಎಂದು ಸುಮ್ಮನಿಲ್ಲ. ನಾವು ಮಾತಾನಾಡುತ್ತಲೇ ಇರುತ್ತೇವೆ."

ವರ್ಣವನ್ನು ಮೊದಲೇ ಏಕೆ ಹಾಡಬೇಕು, ಮಂಗಳವನ್ನು ಕೊನೆಯಲ್ಲಿ ಯಾಕೆ ಹಾಡಬೇಕು ಇತ್ಯಾದಿ ಪ್ರಶ್ನೆಗಳನ್ನು ಕೇಳುತ್ತಿರುವವರಲ್ಲಿ ಕೃಷ್ಣ ಮೊದಲಿಗರೇನಲ್ಲ. ಅರವತ್ತು ವರ್ಷಗಳ ಹಿಂದೆಯೇ ರಾಳ್ಳಪಲ್ಲಿ ಅನಂತಕೃಷ್ಣ ಶರ್ಮ ಈ ಪ್ರಶ್ನೆಗಳನ್ನೆತ್ತಿದ್ದರು. ಭವಿಷ್ಯದಲ್ಲೂ ಈ ಪ್ರಶ್ನೆಗಳಿರುತ್ತವೆ. ಆದರೆ ಕೃಷ್ಣ ಅವರಿಗೆ ತುಂಬಾ ಕಟುವಾದ ವಿರೋಧ ವ್ಯಕ್ತವಾಯಿತು.

"ಪ್ರತಿಯೊಂದು ಸಮಾಜದಲ್ಲೂ ರಾಳ್ಳಪಲ್ಲಿಯಂಥವರು ಇರುತ್ತಾರೆ. ಇಂತಹ ಪ್ರಶ್ನೆಗಳನ್ನು ಜನರ ಮುಂದೆ ಇಟ್ಟು ಚರ್ಚಿಸಲು, ಅರ್ಥಮಾಡಿಕೊಳ್ಳಲು, ಭಿನ್ನಮತ ವ್ಯಕ್ತಪಡಿಸಲು ಒತ್ತಾಯಿಸಿದ್ದಾರೆ. ನಮ್ಮಂತಹವರಿಗೆ ಅದೇ ಬಲ. ನಾನು ಅಂತಹುದೇ ಕಸಿವಿಸಿಗೊಳಿಸುವ, ಕಷ್ಟವಾದ ಪ್ರಶ್ನೆಗಳನ್ನು ಕೇಳುತ್ತಿದ್ದೇನೆ. ಆದರೆ ಅದರಲ್ಲಿ ಹೊಸದೇನಿಲ್ಲ. ಕೇಳುವ ಕ್ರಮ, ಸನ್ನಿವೇಶ ಭಿನ್ನವಾಗಿರಬಹುದು. ಅದೇ ಪರಿಸ್ಥಿತಿ ಮತ್ತೆ ಮತ್ತೆ ಎದುರಾಗುತ್ತಿದೆ ಅಂದರೆ ಯೋಚಿಸಬೇಕಾಗುತ್ತದೆ. ಒಂದೇ ಸಂತೋಷದ ವಿಷಯವೆಂದರೆ ಈಗ ಹೆಚ್ಚು ಜನ ಪ್ರಶ್ನೆ ಕೇಳುತ್ತಿದ್ದಾರೆ. ವಿಭಿನ್ನ ವರ್ಗದ ಜನರಿಂದ ಪ್ರಶ್ನೆಗಳು ಬರುತ್ತಿವೆ. ನಮ್ಮ ಸಂಗೀತದ ವ್ಯವಸ್ಥೆ ಕೂಡ ಶ್ರೇಣೀಕೃತವೆ. ರಾಳ್ಳಪಲ್ಲಿಯವರನ್ನು ಸಂಗೀತಗಾರರು ಎನ್ನುವುದಕ್ಕಿಂತ ಹೆಚ್ಚಾಗಿ ಸಂಗೀತಜ್ಞರು ಎಂದು ಗುರುತಿಸಿದ್ದರು. ಹಾಗಾಗಿ ಅವರನ್ನು ಯಾರೂ ವಿರೋಧಿಸಲಿಲ್ಲ. ಒಂದರ್ಥದಲ್ಲಿ ಅದನ್ನು ಜನ ಗಂಭೀರವಾಗಿ ತೆಗೆದುಕೊಳ್ಳದೆ ನಿರ್ಲಕ್ಷಿಸಿಬಿಟ್ಟರು. ಅದನ್ನೇ ಸೆಮ್ಮಂಗುಡಿ ಶ್ರೀನಿವಾಸ ಅಯ್ಯರ್ ಅಥವಾ ಇನ್ಯಾರಾದರೂ ಸಂಗೀತಗಾರರು ಹೇಳಿದ್ದರೆ, ಹಾಡಿದ್ದರೆ ಪರಿಸ್ಥಿತಿ ಬೇರೆಯೇ ಆಗುತ್ತಿತ್ತು."

ಇಂದು ಸಮಾಜದಲ್ಲಿ ತುಂಬಿರುವ ಅಸಹನೆ, ದ್ವೇಷ ಇವು ಮಾನವೀಯತೆಗೆ ವಿರುದ್ಧವಾದುದು ಅಂತ ಜನರಿಗೆ ತಿಳಿಸಲು ಕಲೆ ನೆರವಾಗಬಹುದೇ ಎನ್ನುವ ಪ್ರಶ್ನೆಯೂ ನಮ್ಮ ಮುಂದಿತ್ತು.